ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೩ನೇ ಮಾರ್ಚ್ ೧೯೮೭ ಚೈತ್ರ ಶು. ೧೯೦೯ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ ೧೧-೧೮ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು ಶ್ರೀ ಬಿ. ಜಿ. ಬಣಕಾರ್ (ಆವರು ಪೀಠವನ್ನು ಅಲಂಕರಿಸಿದರು)]

ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಟಿ. ತಾರೇಗೌಡರವರು ದಿನಾಂಕ ೨೦-೩-೧೯೮೭ ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ರ ವರೆಗೆ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ೧೯೫೭ ರಿಂದ ೧೯೬೨ರ ವರೆಗೆ ಹಾಗೂ ೧೯೭೨ ರಿಂದ ೧೯೭೨ರ ವರೆಗೆ ವಿಧಾನ ಸಭಾ ಸದಸ್ಯರಾಗಿದ್ದರು. ಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

(ಸಭೆಯು ಎದ್ದು ಅಗಲಿದ ಸದಸ್ಯರ ಗೌರವಾರ್ಥವಾಗಿ ಒಂದು ನಿಮಿಷ ಮೌನವನ್ನಾಚರಿಸಿತು)

ಸದಸ್ಯರ ಗೈರು ಹಾಜರಿ

(೧) ಶ್ರೀಮತಿ ಶಕುಂತಲ ಟಿ. ಚೌಗಲೆಯಂವರು ಗೈರುಹಾಜರಾಗಲು ಸಭೆಯ ಅನುಮತಿ ಬಗ್ಗೆ

ಅಧ್ಯಕ್ಷರು.—ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಶಕುಂತಲ ಟಿ. ಚೌಗಲೆಯವರು ಅನಾರೋಗ್ಯದ ನಿಮಿತ್ತವಾಗಿ ದಿನಾಂಕ ೨-೩-೧೯೮೭ ರಿಂದ ೨೦-೩-೧೯೮೭ರ ವರೆಗೆ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ''ಆದ್ದರಿಂದ ಸದರಿ ಮಾನ್ಯ ಸದಸ್ಯರಿಗೆ ಗೈರು ಹಾಜರಾಗಲು ಸಭೆ ಅನುಮತಿ ನೀಡಬಹುದೇ''

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.— ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿಯನ್ನು ನೀಡಲಾಯಿತು.

(೨) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅವರು ಗೈರು ಹಾಜರಾಗಲು ಸಭೆಯ ಅನುಮತಿ ಬಗ್ಗೆ

ಅಧ್ಯಕ್ಷರು.—ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅವರು ದಿನಾಂಕ ೨೦-೩-೧೯೮೭ ರಿಂದ ೩೧-೩-೧೯೮೭ರ ವರೆಗಿನ ಕರ್ನಾಟಕ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಆದ್ದರಿಂದ ಸದರಿ ಮಾನ್ಯ ಸದಸ್ಯರಿಗೆ ಗೈರು ಹಾಜರಾಗಲು ಸಭೆ ಅನುಮತಿ ನೀಡಬಹುದೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.— ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿಯನ್ನು ನೀಡಲಾಯಿತು.

(೩) ಶ್ರೀ ಚಂದ್ರಶೇಖರ್ ಅವರು ಗೈರು ಹಾಜರಾಗಲು ಸಭೆಯ ಅನುಮತಿ ಬಗ್ಗೆ

ಅಧ್ಯಕ್ಷರು.—ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಚಂದ್ರಶೇಖರ್ ಅವರು ಅನಾರೋಗ್ಯದ ಕಾರಣವಾಗಿ ದಿನಾಂಕ ೧೮-೩-೧೯೮೭ ರಿಂದ ೨೮-೩-೧೯೮೭ರ ವರೆಗೆ ವಿಧಾನ ಸಭಾ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಆದ್ದರಿಂದ ಸದರಿ ಮಾನ್ಯ ಸದಸ್ಯರಿಗೆ ಗೈರು ಹಾಜರಾಗಲು ಸಭೆ ಅನುಮತಿ ನೀಡಬಹುದೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.— ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿಯನ್ನು ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ನೇ ಸಾಲಿನ ಮುಖ್ಯ ಮಂತ್ರಿಗಳ ಇಲಾಖೆ ಗೃಹ ಇಲಾಖೆ ರಸ್ತೆ ಸಾರಿಗೆ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮುಂಜೂರಾತಿ

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳವರಿಂದ ಪ್ರಸ್ತಾವನೆ ಮಂಡನೆ

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾವನೆ ಮಂಡನೆ ಮಾಡುವುದಕ್ಕೆ ಮುಂಚೆ.....

ಅಧ್ಯಕ್ಷರು.—ಅವರು ಪ್ರಸ್ತಾವನೆ ಮಂಡನೆ ಮಾಡಲಿ. ಆಮೇಲೆ ತಾವು ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲ ಸ್ವಾಮಿ, ಇದೇನಿದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅಭಿನಂದನೆ ಕ್ರಮಾಂಕ-೧೧ ಯುವಜನ ಸೇವೆ

ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಡಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೪೨,೩೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮುಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.